ಶ್ರೀ ಎಂ. ಬಿ. ರಾಮಸ್ವಾಮಿ.—ಸ್ವಾಮಿ, ಅನೇಕರ್ ತಾಲ್ಲೂಕಿನಲ್ಲಿ ರ್ಯಾಂಡ್ ಅಕ್ಟಿಸೀಷನ್ ಆಗಿದ್ದರೂ ಸಹ ಕಾಂಪನ್ಸೇಷನ್ ತೆಗೆದುಕೊಂಡು ಮನೆ ಕಟ್ಟಿಕೊಳ್ಳುವುದಕ್ಕೆ ನಿವೇಶನಕ್ಕೆ ಅವಕಾಶ ಕೊಡದೆ ತುಂಬಾ ದಿವಸಗಳಿಂದ ಅವರು ತೊಂದರೆಗೆ ಈಡಾಗಿದ್ದಾರೆ. ಇದು ತಮ್ಮ ಗಮನಕ್ಕೆ ಬಂದಿದೆಯೇ ?

†ಶ್ರೀ ಎನ್. ಹುಚ್ಚಮಾಸ್ತಿಗೌಡ.—ಈಗ ಪ್ರಶ್ನೆ ಇರುವುದು, ಅಕ್ಸೈರ್ ಆಗಬೇಕಾಗಿರತಕ್ಕ ಗ್ರಾಮಗಳದ್ದು ಮಾತ್ರ, ಅಕ್ಸೈರ್ ಆಗಿ, ಕಾಂಪನ್ಸೇಷನ್ ಕೊಟ್ಟಿದ್ದರೂ ಕೂಡ ಜಮೀನು ಸ್ವಾಧೀನಕ್ಕೆ ಕೊಡದೆ ಇರುವುದಾದರೆ ಅದನ್ನು ವಿಚಾರಿಸಿ ಸಭೆಗೆ ತಿಳಿಸುತ್ತೇನೆ.

ಶ್ರೀ ಎಂ. ಬಿ. ರಾಮಸ್ವಾಮಿ.—ಸ್ವಾಮಿ, ಈಗ ಸರ್ಕಾರದಲ್ಲಿ ಅಕ್ಸಿಸಿಷನ್ ಆಗಿಯೂ ಸಹ ಅವುಗಳಸ್ವಾಧೀನಕ್ಕೆ ತೆಗೆದುಕೊಳ್ಳದೆ ಇರತಕ್ಕಂಥ ಪ್ರಶ್ನೆ ತಮ್ಮಲ್ಲಿ ಏನಾದರೂ ಬಂದಿದೆಯೇ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ನನ್ನ ಮುಂದೆ ಆ ಉತ್ತರ ಇಲ್ಲ.

Contracts for Electrification of Villages in Dharwar District

51. **Sri B. G. BANAKAR** (Hirekerur).—

Will the Minister for Public Works and Electricity be pleased to state:—

(*a*) the number of villages entrusted to contractors for electrification work in Dharwar District ;

(*b*) whether the contractors have completed the work of electrification in such villages ;

(*c*) if contractors have not started the electrification work, the action taken in the matter ?

Sri H. M. CHANNABASAPPA (Minister for Public Works and Electricity).—

(*a*) 17.

(*b*) No.

(*c*) The works are being taken up according to work orders issued by the Board and they are expected to be completed by November 1972. In case of breach of agreement on the part of the contractors, the Board is entitled to levy penalty on them.

ಶ್ರೀ ಬಿ. ಜಿ. ಬಣಕಾರ್.—ಇದರಲ್ಲಿ 17 ಜನ ಕಂಟ್ರಾಕ್ಟರುಗಳಿಗೆ ಕೆಲಸ ಮಾಡುವುದಕ್ಕೆ ಹೇಳಿದ್ದೀವೆ ಎಂದು ಹೇಳಿದ್ದೀರಿ, ಈ 17 ಜನ ಕಂಟ್ರಾಕ್ಟರುಗಳಿಗೆ ಎಂದು ಆದೇಶ ಕೊಟ್ಟಿದ್ದೀರಿ ? ತಮ್ಮ ಆದೇಶದ ಪ್ರಕಾರ ಅವರು ಮಾಡಿದ್ದಾರೆಯೇ ಇಲ್ಲವೇ ?

†ಶ್ರೀ ಎಚ್. ಎಂ. ಚನ್ನಬಸಪ್ಪ.—17 ಜನ ಕಂಟ್ರಾಕ್ಟರುಗಳಿಗೆ ಕೊಟ್ಟಿದ್ದೀವೆ ಎಂದು ಹೇಳಲಿಲ್ಲ. ತಮ್ಮ ಧಾರವಾಡ ಡಿವಿಜ್ಞನಲ್ಲಿ 17 ಹಳ್ಳಿಗಳನ್ನು ಕಂಟ್ರಾಕ್ಟ ಕೊಟ್ಟಿದ್ದೀವೆ ಎಂದು ಹೇಳಿದ್ದೇವೆ.

ಶ್ರೀ ಬಿ. ಜಿ. ಬಣಕಾರ್.—ಅವರಿಗೆ ನೀವು ಆದೇಶ ಎಂದು ಕೊಟ್ಟಿದ್ದೀರಿ ! ಆದೇಶ ಕೊಟ್ಟರೂ ಸಹ ಇಲ್ಲಿಯವರೆಗೂ ಏತಕ್ಕೆ ಕೆಲಸ ಮಾಡಿಲ್ಲ ?

---

† Indicates that the remarks or speeches have not been re ised by the member concerned.

ಶ್ರೀ ಎಚ್. ಎಂ. ಚನ್ನಬಸಪ್ಪ.—17 ಜನ ಕಂಟಾ್ರಕ್ಟರುಗಳಿಗೆ ಕೊಟ್ಟಿದ್ದೇವೆ ಎಂದು ನಾನು ಹೇಳಲಿಲ್ಲ.

ಶ್ರೀ ಬಿ. ಜಿ. ಬಣಕಾರ್.—17 ಹಳ್ಳಿಗಳನ್ನು ಎಂದು ಎಲೆಕ್ಟ್ರಿಫಿಕೇಷನ್ ಮಾಡುವುದಕ್ಕೆ ಕೊಟ್ಟಿದ್ದೀರಿ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಈ 17 ಹಳ್ಳಿಗಳನ್ನು ನವಂಬರ 1972 ರೊಳಗೆ ಮುಗಿಸ ಬೇಕು ಎಂದು ಹೇಳಿಕೊಟ್ಟಿದ್ದೇವೆ.

ಶ್ರೀ ಬಿ. ಜಿ. ಬಣಕಾರ್.—1972ನೇ ನವಂಬರ್ ತಿಂಗಳೊಳಗೆ ಮುಗಿಸಬೇಕು ಎಂದು ಕರಾರು ಇದೆಯೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಹೌದು.

ಶ್ರೀ ಬಿ. ಜಿ. ಬಣಕಾರ್.—ಈ ಅವಧಿಯೊಳಗೆ ಮುಗಿಸಲಿಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಮುಗಿಸದೆ ಹೋದರೆ ಪೀನಲ್ ಕ್ಲಾಸ್ ಅಪ್ಲೈ ಮಾಡುತ್ತೇವೆ.

ಶ್ರೀ ಗಟ್ಟಿ ಚಂದ್ರಶೇಖರ್.—ಆ 17 ಹಳ್ಳಿಗಳ ಹೆಸರುಗಳನ್ನು ಹೇಳುವುದಕ್ಕೆ ಆಗುತ್ತದೆಯೇ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಬ್ಯಾಡಗಿ ತಾಲ್ಲೂಕಿನಲ್ಲಿ,—1. ಬುಡೋಪನಹಳ್ಳಿ, 2. ಕುಮ್ಮೂರ್, 3. ತಾರೇದಹಳ್ಳಿ.

ಹಿರೇಕರೂರ್ ತಾಲ್ಲೂಕು—1. ಬಿಕ್ಕಕೋಪುರ, 2. ಕಮಲಾಪುರ, 3. ಹೊನವರಾಪುರ, 4. ಕಾಡಮಗ್ಗಿ, 5. ಕೇರಗಿ.

ಶಿಗ್ಗಾವ್ ತಾಲ್ಲೂಕು—i. ಹಿರೇ ಮಲ್ಲೂರ್, 2. ಕುರುನಾಪುರ, 3. ಚಿಕ್ಕನೆಲ್ಲೂರ್, ಚಿಕ್ಕಬಡಗೇರಿ, 5. ಅಡವಿಸೋಮಾಪುರ.

ಹಾನಗಲ್ ತಾಲ್ಲೂಕು—1. ಕುರನೂರು, 2. ಕುಡಾರಾ, 3. ದ್ಯಾತನಹಳ್ಳಿ, 4. ದೊಳೇಶ್ವರ.

Expenditure incurred on Chief Minister

97. **Sri KONANDUR LINGAPPA** (Thirthahalli).—

Will the Chief Minister be pleased to state :—

the total expenditure per month incurred by the Government on the Chief Minister (Information regarding the salary of Chief Minister, allowance, security expenses and expenditure on staff etc., may be furnished) ?

Sri D. DEVARAJ URS (Chief Minister).—

Rs. 24,329-00—

Salary of Chief Minister per month	1,200-00
Allowances per month	350-00
Security expenses per month	6,539-00
Expenditure on staff per month	16,240-00